459

ಮೈಸೂರ ಗೆಜೆಟ್

ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು.

ಬೆಂಗಳೂರು, ಶನಿವಾರ, ಮಾರ್ಚಿ ತಾ|| 23, ಸನ 1889.

☞ ಈ ಭಾಗವನ್ನು ಪ್ರತ್ಯೇಕ ಕೀರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್ರೀರು, ವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಬೆಂಗಳೂರು ಷಹರ್ ಮ್ಯುನಿಸಿಪಾಲಿಟಿ.

ತಾರೀಖು 19ನೇ ಫಿಬ್ರವರಿ 1889.

1871ನೇ ಇಸವಿಯ ಬೆಂಗಳೂರು ಮ್ಯುನಿಸಿಪಲ್ ರೆಗ್ಯುಲೇಷನಿನ 190ನೇ ಸೆಕ್ಷನ್ ನಿಯಮಗಳನುಸರಿಸಿ ಸರ್ಟಿಫಿಕೇಟ್.

ಷಹರ್ ಮ್ಯುನಿಸಿಪಲ್ ಕಮ್ಮಿಷನರುಗಳು, ಆರ್ಡರಾದ ಮೆಡಿಕಲ್ ಆಫೀಸರರ ಅಭಿಪ್ರಾಯ ಪಡೆದ ತರುವಾಯ, ಸೆಂಟ್ರಲ್ ಜೈಲ್ ಬಳಿಯಣ ತಿಪ್ಪಕಟ್ಟೆ ಮಶಕ್ಕೆ ಕೀರಿದ ಲಿಂಗಾಯತರ ರುದ್ರಭೂಮಿಯನ್ನು ಆರೋಗ್ಯ ಕಾರಣಂಗಳಿಗೋಸ್ಕರ ಬಂದ್ ಮಾಡಬೇಕೆಂದು ತೀರ್ಮಾನಿಸಿರುವ ಪ್ರಯುಕ್ತಾ, ಯೆದರ ಬೆಕೆಯಿಂದ ಸರ್ವರ ತಿಳುವಳಿಕೆ ಬಗ್ಯೆ ಪ್ರಕಟಪಡಿಸುವದೇನಂದರೆ, 1889ನೇ ಇಸವಿ ಏಪ್ರೆಲ್ 25ನೇ ತಾರೀಖಾರಭ್ಯ ಸದರೀ ತಿಪ್ಪಕಟ್ಟೆಮಶದಲ್ಲಿಯೂ ಅದರ ಆಸಪಾಸಿನಲ್ಲಿಯೂ ಯಾವ ಸಮಾಧಿಯೂ ಮಾಡಲ್ಪಡಕೂಡುದು, ಮತ್ತು ಸದರೀ ಸಮಾಧೀಕೆಲಸಕ್ಕಾಗಿ ಮಾಗಡೀ ರಸ್ತೆಯಲ್ಲಿ ಗುರುವ್ಪನ ಮಶದಬಳಿ ಷಹರಿಗೆ ಸುಮಾರು ಫರಲಾಂಗಿನಲ್ಲಿ ಮತ್ತೊಂದು ರುದ್ರ ಭೂಮಿ ಯಿರುತ್ತದೆಂಬಿದಾಗಿ ಲಿಂಗಾಯತ ಪಣಕಟ್ಟಿನವರು ಯೆದರ ಬೆಕೆಯಿಂದ ತಿಳಿಸಲ್ಪಟ್ಟಿರುತ್ತಾರೆ.

ಎ. ಶ್ರೀನಿವಾಸಾಚಾರಲು, ಆರ್. ಬಿ. ವೈಸ್ ಪ್ರೆಸಿಡೆಂಟ್.

ಫಾರೆಸ್ಟ್ ಇಲಾಖಾ.

ತಾರೀಖು 8ನೇ ಮಾರ್ಚ್ 1889.

ಸನ 1878ನೇ ಇಸವಿ ಫಾರೆಸ್ಟ್ಸ್ ರೂಲ್ಸಿನ 9ನೇ ಸೆಕ್ಷನ್ ಅನುಸರಿಸಿ ಬೆಂಗಳೂರು ಡಿಸ್ಟ್ರಿಕ್ಟಿನ ನೆಲವಂಗಲದ ತಾಲ್ಲೂಕಿನಲ್ಲಿರುವ ರವಿನ್ಯೂ ಪ್ಯಾಟೇಷನಿನ ಸರಹದ್ದು ಸಕಲರ ತಿಳುವಳಿಕೆ ಬಗ್ಯೆ ಫಾಯಿಷ್ ಮಾಡಲ್ಪಟ್ಟು ಇರುತ್ತದೆ.

ತಾಲ್ಲೂಕು.	ಹೋಬಳಿ.	ಗ್ರಾಮ.	ಪ್ಯಾಟೇರ್ಷ ಹೆಸರು	ಪೂರ್ವಕ್ಕೆ	ಪಶ್ಚಿಮಕ್ಕೆ	ಉತ್ತರಕ್ಕೆ	ದಕ್ಷಿಣಕ್ಕೆ	ಷರಾ.
ನೆಲವಂಗಲ	ಮೈನಹಳ್ಳಿ	ಬೈರಕಟ್ಟೆಹಳ್ಳಿ	ಸಂದಲ್ ಪ್ಯಾಟೇರ್ಷ	ಹ್ಯಾತಾಳಿಗೆ ಕೀರಿದ ತಿರುಮಲಗವುಡನ ಪಾಳ್ಯ	ನರಸುಹ್ಮಪಾಳ್ಯ	ವಜ್ರಗಟ್ಟೆಪಾಳ್ಯ	ಬೋಳಮಾರನಹಳ್ಳಿ, ಯಲ್ಲಿ	
ಡಿಟೋ	ನಿಜಗಲ್	ವೀರಸಾಗರ	ಶ್ರೀಗಂಧದ ಪ್ಯಾಟೇರ್ಷ	ಕೆಂಗಲ್ ಗ್ರಾಮದ ಸರ್ವೆ 74 ಮತ್ತು 73ನೇ ನಂ.	ವೀರಸಾಗರ ಗ್ರಾಮದ 35ನೇ ನಂ. ಜಮೀನು	ವೀರಸಾಗರ ಗ್ರಾಮದ 33ನೇ ನಂ. ಜಮೀನ್ ಗೋಮಾಳ	ವೀರಸಾಗರ ಗ್ರಾಮದ 33ನೇ ನಂ. ಮತ್ತು 32ನೇ ನಂ.	

ಎಲ್. ರಿಕೆಟ್ಸ್, ಫಾರೆಸ್ಟ್ಸ್ ಇನ್‌ಸ್ಪೆಕ್ಟರ್ ಜನರಲ್.